ಓ.ಎಸ್. ನಂ. 21/2014
ಡಿ.ಡಬ್ಲ್ಯು: 01 (ಈಶ್ವರಯ್ಯ)

ದಿನಾಂಕ: 20.09.2025 ರಂದು ಮುಖ್ಯ ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರ ಶ್ರೀ ಎ ಎಸ್ ಆರ್ ವಕೀಲರಿಂದ:

ಸಾಕ್ಷ್ಯ ರೂಪದಲ್ಲಿ ಹಾಜರು ಪಡಿಸಿರುವ ನನ್ನ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ತಿಳಿದುಕೊಂಡು ನಾನು ನನ್ನ ಸಹಿ ಮಾಡಿದ್ದೇನೆ.

ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳ ವಿವರ ಈ ಕೆಳಗಿನಂತಿವೆ:

1. ದಿ: 26.04.1973 ರ ಕ್ರಯ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಡಿ 01 ಎಂದು ಗುರುತಿಸಲಾಯಿತು.
2. ದಿ: 22.08.1983 ರ ಕ್ರಯ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ 02 ಎಂದು ಗುರುತಿಸಲಾಯಿತು.
3. ಹಕ್ಕು ಬದಲಾವಣೆ ವಹಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 03 ಎಂದು ಗುರುತಿಸಲಾಯಿತು.
4. ನಮೂನೆ ಕ್ರಮಾಂಕ 10 ರ ಯಥಾ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 04 ಎಂದು ಗುರುತಿಸಲಾಯಿತು.
5. ದಾವಾ ಸ್ವತ್ತಿಗೆ ಸಂಬಂಧಪಟ್ಟ ಕಚ್ಚಾ ನಕಾಶೆಯ ಯಥಾ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 05 ಎಂದು ಗುರುತಿಸಲಾಯಿತು.
6. ಬಳ್ಳಾರಿ ಭೂ ದಾಖಲೆಗಳ ಉಪ ನಿರ್ದೇಶಕರು ನೀಡಿದ ತಿಳುವಳಿಕೆ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ 06 ಎಂದು ಗುರುತಿಸಲಾಯಿತು.
7. ಕಂದಾಯ ಸರ್ವೇ ಅಪೀಲು ಸಂಖ್ಯೆ 33/2004-05 ರಲ್ಲಿನ ಮಧ್ಯಂತರ ಅರ್ಜಿ, ಅರ್ಜಿ, ದಾಖಲಾತಿಗಳ ಪಟ್ಟಿ, ಮತ್ತೊಂದು ಮಧ್ಯಂತರ ಅರ್ಜಿ, ತಕರಾರು ಹಾಗೂ ಆದೇಶದ ಯಥಾ ನಕಲು ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಡಿ 07 ಎಂದು ಗುರುತಿಸಲಾಯಿತು.
8. ಸರ್ವೆ ನಂಬರ್ 92/1, 92/2, 92/3, 92/4 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಡಿ 08-11 ಎಂದು ಗುರುತಿಸಲಾಯಿತು.
9. ಜಿಪಿಎ ಹಾಜರುಪಡಿಸಿದ್ದು ಅದನ್ನು ನಿಡಿ 12 ಎಂದು ಗುರುತಿಸಲಾಯಿತು.

ಮುಖ್ಯ ವಿಚಾರಣೆ: ಮುಕ್ತಾಯ.

ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಕೂಡ್ಲಿಗಿ.